ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE: 23/3/21

ವಿಧಾನಸಭೆಯಲ್ಲಿ ಅಶ್ಲೀಲ ವಿಡಿಯೊ ಸದ್ದು | ತಡೆಯಾಜ್ಞೆ ತಂದ 6 ಸಚಿವರ ರಾಜೀನಾಮೆಗೆ ಪಟ್ಟು
ಎಸ್‌ಐಟಿ ತನಿಖೆ ನಡೆಯುತ್ತಿದೆ: ಸರಕಾರದ ಸಮರ್ಥನೆ | ಕಾಂಗ್ರೆಸ್ ವಿರುದ್ಧ ಮೇಟಿ ಅಸ್ತ್ರಪ್ರಯೋಗ

# ಸದನದಲ್ಲಿ ಸಿಡಿದೆದ್ದ ಕಾಂಗ್ರೆಸ್


ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ಸಂಚಲನ ಉಂಟು ಮಾಡಿರುವ ಹಾಗೂ ನೈತಿಕತೆಯ ಪ್ರಶ್ನೆ ಹುಟ್ಟು ಹಾಕಿರುವ ಅಶ್ಲೀಲ ವಿಡಿಯೊ ಪ್ರಕರಣ ವಿಧಾನಸಭೆಯಲ್ಲಿ ಸೋಮವಾರ ಭಾರಿ ಸದ್ದು ಮಾಡಿತು.

ಈ ವಿಚಾರವಾಗಿ ಸರಕಾರದ ವಿರುದ್ಧ ಮುಗಿಬಿದ್ದ ಪ್ರತಿಪಕ್ಷ ಕಾಂಗ್ರೆಸ್, ಮಾನಹಾನಿ ಸುದ್ದಿ ಪ್ರಸಾರಕ್ಕೆ ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವ 6 ಸಚಿವರ ರಾಜೀನಾಮೆ ಪಡೆಯುವಂತೆ ಪಟ್ಟು ಹಾಕಿತು. ಜತೆಗೆ ಈ ಚರ್ಚೆಗೆ ಸರಕಾರ ನೀಡಿದ ಉತ್ತರ ತೃಪ್ತಿ ತಂದಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು.



ಸಿ.ಡಿ ಪ್ರಕರಣದ ಬಗ್ಗೆ ನಿಲುವಳಿ ಸೂಚನೆ ಮಂಡಿಸಲು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವಕಾಶ ಕೇಳಿದ್ದರು. ಸ್ಪೀಕರ್ ವಿಶ್ವೇಶ್ವರ ಕಾಗೇರಿ ನಿಲುವಳಿ ಬದಲು ನಿಯಮ 69ರ ಅಡಿ ಚರ್ಚಿಸಲು ಸಮಯ ನಿಗದಿ ಮಾಡಿದರು. ಅದರಂತೆ ಭೋಜನ ವಿರಾಮದ ಬಳಿಕ ಚರ್ಚೆ ಪ್ರಾರಂಭಿಸಿದರು. ಲಾ ಪಾಯಿಂಟ್ ಹಾಕುತ್ತ ಪ್ರಕರಣ ಸಂಬಂಧ ಮಾತನಾಡುತ್ತ ಹೋದ ಸಿದ್ದರಾಮಯ್ಯ, 6 ಸಚಿವರು ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವುದು ಸರಿಯಲ್ಲ, ಇದರಲ್ಲಿ ನೈತಿಕತೆ ಪ್ರಶ್ನೆಯಿದೆ. ಹಾಗಾಗಿ ಅವರು ರಾಜೀನಾಮೆ ನೀಡಲೇಬೇಕೆಂದು ಒತ್ತಾಯಿಸಿದರು.



ಇಂತಹ ಸೂಕ್ಷ್ಮ ವಿಚಾರದ ಚರ್ಚೆ ನಡೆಯುವಾಗ ವಾದ-ಪ್ರತಿವಾದದ ಬದಲು ಪ್ರಾರಂಭದಲ್ಲೇ ಗದ್ದಲ ನಡೆದ ನಿದರ್ಶನವಿದೆ. ಆದರೆ, ಸಂಸದೀಯ ವ್ಯವಹಾರಗಳ ಖಾತೆ ನೋಡಿಕೊಳ್ಳುವ ಸಚಿವ ಬಸವರಾಜ ಬೊಮ್ಮಾಯಿ ಅವರು ಯಾವುದೇ ಸಂದರ್ಭದಲ್ಲಿ ಈ ಚರ್ಚೆ ಅತಿರೇಕಕ್ಕೆ ಹೋಗದಂತೆ ನೋಡಿಕೊಂಡರು. ಸದನದ ಘನತೆ; ಗೌರವ ಕಾಪಾಡುವ ನಿಟ್ಟಿನಲ್ಲಿ ಅವರು ಈ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಗಮನ ಸೆಳೆದರು. ಜತೆಗೆ ಸರಕಾರದ ನಿಲುವನ್ನು ಪರಿಣಾಮಕಾರಿಯಾಗಿ ಸಮರ್ಥಿಸಿಕೊಂಡರು.

ಕೋರ್ಟ್‌ನಿಂದ ಸ್ಟೇ ತಂದಿರುವ 6 ಸಚಿವರ ಹೆಸರನ್ನು ಸಿದ್ದರಾಮಯ್ಯ ಹೇಳಿದಾಗ ಸಚಿವ ಬಸವರಾಜ ಬೊಮ್ಮಾಯಿ ಆಕ್ಷೇಪಿಸಿದರು. ಜತೆಗೆ ಎಚ್.ವೈ.ಮೇಟಿ ಪ್ರಕರಣವನ್ನು ನೆನಪಿಸಿದರು. ಮೇಟಿ ಪ್ರಕರಣದ ಅಸ್ತ್ರ ಬಳಸಿ ಪ್ರತಿಪಕ್ಷದ ವಾಗ್ದಾಳಿಯನ್ನು ತುಂಡು ಮಾಡುವ ಸರಕಾರದ ಪ್ರಯತ್ನ ಫಲ ನೀಡಲಿಲ್ಲ. ಮೇಟಿ ಪ್ರಕರಣದ ಬಳಿಕ ಆಗಿನ ಕಾಂಗ್ರೆಸ್ ಶಾಸಕರೊಬ್ಬರು ಕೋರ್ಟ್‌ನಿಂದ ಸ್ಟೇ ತಂದದ್ದನ್ನೂ ಬೊಮ್ಮಾಯಿ ನೆನಪಿಸಿದರು. ಆಗ ಸಿದ್ದರಾಮಯ್ಯ "ನಿಮ್ಮ ಲೋಣ ಶಾಸಕರೂ ತಂದಿದ್ದಾರೆ," ಎಂದು ತಿರುಗೇಟು ಕೊಟ್ಟರು.

## ಕಾಂಗ್ರೆಸ್ ಧರಣಿ ಮುಂದುವರಿಕೆ

ಕಲಾಪ ಮುಂದೂಡಿಕೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಮಂಗಳವಾರ ಧರಣಿ ಮುಂದುವರಿಸುವುದಾಗಿ ತಿಳಿಸಿದ್ದಾರೆ. ಹಾಗಾಗಿ ಈ ಅಧಿವೇಶನದ ಮೇಲೆ ಪ್ರತಿಪಕ್ಷದ ಧರಣಿಯ ನೆರಳು ಆವರಿಸಿದಂತಾಗಿದೆ.

ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಉಸ್ತುವಾರಿಯಲ್ಲಿ ರಚನೆಯಾಗುವ ನ್ಯಾಯಾಂಗ ಸಮಿತಿಯಿಂದ ತನಿಖೆ ಮಾಡಿಸಬೇಕು. 6 ಸಚಿವರು ತಕ್ಷಣ ರಾಜೀನಾಮೆ ಕೊಡಬೇಕು.
-ಸಿದ್ದರಾಮಯ್ಯ ಪ್ರತಿಪಕ್ಷ ನಾಯಕ

ನ್ಯಾಯಾಂಗ ವ್ಯವಸ್ಥೆಯಲ್ಲಿ ಸಾಮಾನ್ಯ ನಾಗರಿಕರಿಗೆ ನೀಡಿರುವ ಹಕ್ಕನ್ನು ಪಡೆದಿದ್ದೇವೆ. ಸುದ್ದಿಯ ಸತ್ಯಾಸತ್ಯೆಯನ್ನು ಪರಿಶೀಲನೆಗೆ ಒಳಪಡಿಸಿ ಸುದ್ದಿ ಬಿತ್ತರಿಸುವಂತೆ ಕೋರ್ಟ್ ಆದೇಶಿಸಿದೆ.
-ಡಾ. ಕೆ.ಸುಧಾಕರ್ ಸಚಿವ

ಸೈಬರ್ ಕ್ರೈಂ ವಿಭಾಗದಿಂದ ಈ ವಿಡಿಯೊ ನಿಜಾನಾ? ಸುಳ್ಳಾ ಎಂಬ ಮಾಹಿತಿ ಪಡೆಯಿರಿ. ವಿಡಿಯೊ ಎಡಿಟ್ ಆಗಿದೆಯಾ? ಇಲ್ಲವಾ? ಗೊತ್ತಾದರೆ ಸಾಕು. ನಮ್ಮ ಪೊಲೀಸ್ ವ್ಯವಸ್ಥೆಗೆ ಗೌರವವಿದೆ. ಒನ್ ಸೈಡ್ ತನಿಖೆಯಿಂದ ಅದನ್ನು ಹಾಳು ಮಾಡಬೇಡಿ.
-ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ

ಸಿ.ಡಿ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಲಾಗಿದೆ. ಎಲ್ಲ ಆಯಾಮದ ಬಗ್ಗೆ ವಿಚಾರಣೆಯಾಗಲಿದೆ. 6 ಸಚಿವರು ಸಂವಿಧಾನ ಬದ್ಧವಾಗಿ ಇರುವ ಅವಕಾಶ ಬಳಸಿಕೊಂಡು ಕೋರ್ಟ್‌ನಿಂದ ತಡೆಯಾಜ್ಞೆ ಪಡೆದಿದ್ದಾರೆ.
-ಬಸವರಾಜ ಬೊಮ್ಮಾಯಿ ಗೃಹ ಸಚಿವ

12

# ದಿನಕ್ಕೊಂದು ಸ್ಥಳ, ಗಂಟೆಗೊಂದು ಲೊಕೇಷನ್

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸಿ.ಡಿ ಪ್ರಕರಣದ ಆರೋಪಿಗಳು ದಿನಕ್ಕೊಂದು ಸ್ಥಳ ಬದಲಿಸುತ್ತಿರುವುದರಿಂದ ಪತ್ತೆ ಮಾಡುವುದು ಎಸ್ಐಟಿ ತನಿಖಾಧಿಕಾರಿಗಳಿಗೆ ತಲೆನೋವಾಗಿದೆ.

ಪ್ರಕರಣದ ಶಂಕಿತರು ತಮ್ಮ ಇರುವಿಕೆಯ ಬಗ್ಗೆ ತಾಂತ್ರಿಕವಾಗಿ ಒಂದೂ ಸುಳಿವು ಸಿಗದಂತೆ ಎಚ್ಚರ ವಹಿಸುತ್ತಿದ್ದಾರೆ. ಸಿ.ಡಿ ಗುಂಪಿನಲ್ಲಿರುವ ಶ್ರವಣ್ ಎಥಿಕಲ್ ಹ್ಯಾಕರ್ ಆಗಿದ್ದು, ಮೊಬೈಲ್ ಟವರ್ ಲೊಕೇಷನ್ ಮಿಸ್ ಮ್ಯಾಪಿಂಗ್ ಮಾಡಿ, ಅಧಿಕಾರಿಗಳ ಪತ್ತೆ ಹಾದಿ ತಪ್ಪಿಸುತ್ತಿದ್ದಾನೆ. ವಿಡಿಯೊದಲ್ಲಿರುವ ಯುವತಿಯ ಮೊಬೈಲ್‌ಗೆ ನಾನಾ ಸಾಫ್ಟ್‌ವೇರ್ ಇನ್‌ಸ್ಟಾಲ್ ಹಾಗೂ ಟವರ್ ಲೊಕೇಷನ್ ಮಿಸ್ ಮ್ಯಾಚ್ ಸೇರಿ ಹಲವು ಸಾಫ್ಟ್‌ವೇರ್ ಬಳಕೆ ಮೂಲಕ ಎಸ್‌ಐಟಿ ಅಧಿಕಾರಿಗಳಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿಶೇಷ ತಜ್ಞರ ನೆರವು ಪಡೆಯಲು ಅಧಿಕಾರಿಗಳು ಮುಂದಾಗಿದ್ದಾರೆ.

### ವಿಡಿಯೊದಲ್ಲಿ ಕಾಣಿಸಿಕೊಂಡ ಲೇಡಿಗೆ [illegible]

ಸಿ.ಡಿ ಲೇಡಿಗೆ ಮೊದಲೇ ಒಂದಷ್ಟು ಹಣ ನೀಡಿದ್ದ ಸಿಡಿ ಗ್ಯಾಂಗ್, ವಿಡಿಯೊ ಕಾಲ್ ರೆಕಾರ್ಡ್, ವಿಡಿಯೊ ಮಾಡುವ ವಿಧಾನ, ಯಾವ ಆ್ಯಂಗಲ್‌ನಲ್ಲಿ ಕ್ಯಾಮೆರಾ ಇರಬೇಕು ಎಂಬುದರ ಬಗ್ಗೆ 3 ತಿಂಗಳು ತರಬೇತಿ ನೀಡಿತ್ತು ಎನ್ನಲಾಗಿದೆ. ಈ ಎಲ್ಲ ದೃಶ್ಯಗಳನ್ನು ಸೆರೆ ಹಿಡಿಯುವುದರಲ್ಲಿ ಆಕೆ ಪಳಗಿದ ಬಳಿಕ ಸಮಯ ನೋಡಿ ವಿಡಿಯೊ ಮಾಡಲಾಗಿದೆ. ಆಕೆ ಕೆಲಸ ಪೂರ್ಣಗೊಂಡ ಬಳಿಕ ಸೆರೆಯಾಗಿದ್ದ ದೃಶ್ಯಾವಳಿಗಳನ್ನು ಗ್ಯಾಂಗ್‌ಗೆ ನೀಡಿದ್ದಾಳೆ. ಕೊಟ್ಟಿದ್ದ ಮಾತಿನಂತೆ ಮುಖ ಛಾಯೆ ಯಾರಿಗೂ ಕಾಣುವುದಿಲ್ಲ ಎಂದು ನಂಬಿದ್ದಳು. ಆದರೆ, ನಂತರ ನಡೆದದ್ದೇ ಬೇರೆ.

### [illegible]

''ಯುವತಿ ಎಂಜಿನಿಯರಿಂಗ್ ವ್ಯಾಸಂಗ ಮುಗಿಸಿ 45 ಸಾವಿರ ರೂ. ವೇತನದ ಉದ್ಯೋಗಕ್ಕೆ ಸೇರಿದ್ದಳು. ಸಿ.ಡಿ ಗ್ಯಾಂಗ್ ಜತೆ ಗುರುತಿಸಿಕೊಂಡಿದ್ದಾಳೆ. ಶಂಕಿತ ಆರೋಪಿ ಶ್ರವಣ್ ಮತ್ತು ಯುವತಿ ಒಂದೇ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರಿಂದ ಈ ಮೊದಲೇ ಇಬ್ಬರಿಗೂ ಪರಿಚಯವಿತ್ತು,'' ಎಂದು ಯುವತಿಯ ಪ್ರಿಯಕರ ಅಧಿಕಾರಿಗಳಿಗೆ ತಿಳಿಸಿದ್ದಾನೆ.

### [illegible]

ಪ್ರಕರಣದ ಸಂಬಂಧ ಮಾಜಿ ಶಾಸಕ ನಾಗರಾಜ್ ಅವರನ್ನು ಎಸ್‌ಐಟಿ ಸೋಮವಾರ ಆಡುಗೋಡಿಯಲ್ಲಿರುವ ಟೆಕ್ನಿಕಲ್ ಸೆಂಟರ್‌ನಲ್ಲಿ ವಿಚಾರಣೆಗೊಳಪಡಿಸಿದೆ. ವಿಚಾರಣೆ ವೇಳೆ ಅವರಿಗೆ ಎಸ್‌ಐಟಿ ಹಲವು ಪ್ರಶ್ನೆಗಳನ್ನು ಕೇಳಿತು ಎಂದು ತಿಳಿದು ಬಂದಿದೆ.

# ಸದನದಲ್ಲಿ ಸಿಡಿದೆದ್ದ ಕಾಂಗ್ರೆಸ್

» ಮೊದಲ ಪುಟದಿಂದ

23/3/21

ಸುಮಾರು 4 ತಾಸು ನಡೆದ ಈ ಚರ್ಚೆಯನ್ನು ಸಿಎಂ ಬಿ.ಎಸ್.ಯಡಿಯೂರಪ್ಪ ಅವರೂ ಆಲಿಸಿದರು. ಸಿದ್ದರಾಮಯ್ಯ ಮಾತಿಗೆ ಆಗಾಗ ಬ್ರೇಕ್ ಹಾಕಲು ಯತ್ನಿಸಿದ ಗೃಹ, ಕಾನೂನು ಮತ್ತು ಸಂಸದೀಯ ಸಚಿವ ಬಸವರಾಜ ಬೊಮ್ಮಾಯಿ ''ಸಿ.ಡಿ ಪ್ರಕರಣದ ಬಗ್ಗೆ ಎಸ್‌ಐಟಿ ತನಿಖೆ ನಡೆಯುತ್ತಿದೆ. 6 ಸಚಿವರು ಸಂವಿಧಾನಬದ್ಧವಾಗಿ ಇರುವ ಅವಕಾಶ ಬಳಸಿಕೊಂಡಿದ್ದಾರೆ,'' ಎಂದು ಸಮರ್ಥಿಸಿಕೊಂಡರು. ಇದಲ್ಲದೆ ಸಚಿವರಾದ ಡಾ. ಕೆ.ಸುಧಾಕರ್, ಎಸ್.ಟಿ.ಸೋಮಶೇಖರ್, ಶಿವರಾಮ ಹೆಬ್ಬಾರ್, ಕೆ.ಸಿ.ನಾರಾಯಣ ಗೌಡ ತಾವು 6 ಮಂದಿ ಕೋರ್ಟ್‌ಗೆ ಹೋಗಿದ್ದನ್ನು ಸಮರ್ಥಿಸಿಕೊಂಡರು. ಸಿದ್ದರಾಮಯ್ಯ ಕೆಣಕಿದಾಗ ಪ್ರತಿಕ್ರಿಯಿಸಿದ ಸಚಿವ ಕೆ. ಗೋಪಾಲಯ್ಯ ಕೂಡ ''ನಾನು ಕೋರ್ಟ್‌ನಿಂದ ತಡೆಯಾಜ್ಞೆ ತಂದಿಲ್ಲ. ಆದರೆ, ನಾವೆಲ್ಲರೂ ಒಗ್ಗಟ್ಟಿನಿಂದ ಇದ್ದೇವೆ. ಮುಂಬಯಿಯಲ್ಲಿ ಎಲ್ಲರೂ ಜತೆಗಿದ್ದೆವು. ಅಂತಹ ಯಾವ ಘಟನೆಯೂ ನಡೆದಿಲ್ಲ'' ಎಂದರು.

**ಜಾರಕಿಹೊಳಿ ಪ್ರಸ್ತಾಪಕ್ಕೆ ವಿರೋಧ:** ಸಿದ್ದರಾಮಯ್ಯ ಅವರು ರಮೇಶ್ ಜಾರಕಿಹೊಳಿ ಹೆಸರು ಪ್ರಸ್ತಾಪಿಸಿದಾಗ ಆಕ್ಷೇಪಿಸಿದ ಮಾಜಿ ಸ್ಪೀಕರ್ ಕೆ.ಜೆ.ಬೋಪಯ್ಯ, ಸದನದಲ್ಲಿ ಅವರು ಇಲ್ಲದಿರುವಾಗ ಹೆಸರು ಹೇಳುವುದು ಸೂಕ್ತವಲ್ಲವೆಂದರು. 6 ಸಚಿವರು ಕೋರ್ಟ್‌ನಿಂದ ಸ್ಟೇ ತಂದಿರುವ ಬಗ್ಗೆ ಸಿದ್ದರಾಮಯ್ಯ ಹೇಳಿದಾಗಲೂ ''ಈ ಸಂಬಂಧ ಕೋರ್ಟ್ ಮಧ್ಯಂತರ ಆದೇಶ ನೀಡಿದೆ. ವಿಚಾರಣೆ ಬಾಕಿಯಿರುವಾಗ 6 ಸಚಿವರು ಸ್ಟೇ ತಂದಿದ್ದರ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ'' ಎಂದು ಕ್ರಿಯಾಲೋಪವೆತ್ತುವ ಮೂಲಕ ಬೋಪಯ್ಯ ಆಕ್ಷೇಪಿಸಿದರು. ಆದರೆ ಕಾವೇರಿ ನೀರಾವರಿ ವ್ಯಾಜ್ಯ, ಡಿ.ಕೆ.ರವಿ ಪ್ರಕರಣ ಕುರಿತು ಸದನದಲ್ಲಿ ಚರ್ಚೆಯಾಗಿದೆಯೆಂದು ಸಿದ್ದರಾಮಯ್ಯ ವಾದಿಸಿದರು.